
ಅರಳುವುದು ಹೇಗೆ ಸಾಧ್ಯ?

ಹಾಗಿದ್ದರೂ ನಾವೆಲ್ಲಾ ಈ ಪ್ರೇಮಿಗಳ ದಿನಾಚರಣೆಯ ನೆಪದಲ್ಲಿ ನಮ್ಮೊಳಗಿನ ಕಾತರ, ತಳಮಳ, ಗೊಂದಲಗಳ ಬಗೆಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ. ಈ ಮೂಲಕ ಜ್ಞಾನ ಮತ್ತು ಸೂಕ್ಷ್ಮ ಸಂವೇದನೆಗಳ ಹೊಸ ರೀತಿಯ ಪ್ರೇಮಿಗಳ ದಿನಾಚರಣೆಗೆ ಮುನ್ನುಡಿ ಹಾಡೋಣ.



## ಹಿರಿಯರ ಟೀಕಾಪ್ರಹಾರ

ಮಕ್ಕಳೇ, ನಿಮಗೆಲ್ಲಾ ಪೋಷಕರು, ಗುರು ಹಿರಿಯರಿಂದ ಟೀಕೆ, ಬುದ್ಧಿವಾದ, ಉಪದೇಶಗಳನ್ನು ಕೇಳಿ ಮನಸ್ಸು ರೋಸಿ ಹೋಗಿರಬೇಕಲ್ಲವೇ? ನಿಮಗೆಲ್ಲಾ ಜವಾಬ್ದಾರಿಯೇ ಇಲ್ಲ, ಸದಾಕಾಲ ಮೊಬೈಲ್, ಸ್ನೇಹಿತರು ಅಂತ ತಿರುಗ್ತೀರಾ, ಸರಿಯಾಗಿ ಓದಲ್ಲ, ಹೇಳಿರೋ ಕೆಲಸ ನೆಟ್ಟಗೆ ಮಾಡಲ್ಲ, ಹೀಗೆ ಆದ್ರೆ ನಿಮ್ಮ ಕೈಲಿ ಏನೂ ಮಾಡೋಕಾಗೋಲ್ಲ, ಹಾಳಾಗೋಗ್ತೀರಾ.... ಹೀಗೆ ಒಂದೇ ಎರಡೇ. ಇಷ್ಟೇ ಸಾಲದು ಎಂಬಂತೆ 'ಅವರ ಮನೆ ಹುಡುಗನ್ನ ನೋಡು' ಎಂದು ಯಾರು ಯಾರಿಗೋ ವ್ಯಂಗ್ಯವಾಗಿ ಹೋಲಿಸಿ ನೀವೂ ಅವರಂತೆ ಬದಲಾಗಬೇಕೆಂದು ಉಪದೇಶಿಸುತ್ತಾರೆ. ಮಜಾ ಅಂದ್ರೆ ಅವರ ಮನೆಯಲ್ಲಿಯೂ ಕೂಡ ಅಪ್ಪ ಅಮ್ಮ ಅವರ ಮಕ್ಕಳನ್ನು ನಿಮ್ಮ ಜೊತೆ ಹೋಲಿಕೆ ಮಾಡಿ ನಿಮ್ಮಿಂದ ಕಲಿಯಬೇಕೆಂದು ಹೇಳುತ್ತಿರಬಹುದು!

ಕೆಲವರು ಇನ್ನೂ ಮುಂದೆ (ನಿಜವಾಗಿ ಹಿಂದೆ) ಹೋಗಿ, 'ನಮ್ಮ ಕಾಲದಲ್ಲಿ ಹೀಗಿರಲಿಲ್ಲ, ನಾವೆಲ್ಲಾ ಹೇಗೆ ಜವಾಬ್ದಾರಿಯುತವಾಗಿ ಬೆಳೆದಿದ್ದೆವು, ಏನೇನೆಲ್ಲಾ ಸಾಧಿಸಿದ್ದೆವು, ಈಗ ಕಾಲ ಕೆಟ್ಟುಹೋಗಿದೆ..' ಎಂದೆಲ್ಲಾ ಪುರಾಣ ತೆಗೆಯುತ್ತಾರೆ. ನಾನು ನಿಮಗೊಂದು ಗುಟ್ಟು ಹೇಳುತ್ತೇನೆ. ನಿಮ್ಮ ಪೋಷಕರಿಗೂ ಕೂಡ ಅವರ ಅಪ್ಪ, ಅಮ್ಮಂದಿರು ಇದೇ ರೀತಿಯ ಮಾತುಗಳನ್ನು ಹೇಳುತ್ತಿದ್ದರು! ಹಾಗಾಗಿ ಇದನ್ನು ವಂಶ ಪಾರಂಪರ್ಯವಾದ ಆಸ್ತಿಯ ರೂಪದಲ್ಲಿ ನಿಮಗೆ ತಲುಪಿಸಲಾಗುತ್ತಿದೆ. ಬಹುಶಃ ನೀವೂ ಮುಂದೊಂದು ದಿನ ಇದನ್ನು ಬೇರೆಯ ರೂಪದಲ್ಲಿ ನಿಮ್ಮ ಮಕ್ಕಳಿಗೆ ತಲುಪಿಸುತ್ತೀರೇನೋ!




ತೃಪ್ತಿ ಮತ್ತು ಸಂತೋಷ ಎನ್ನುವ ಶಬ್ದಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ ಎಂದು ಹೇಳಿದರೆ ನಿಮಗೆ ಒಪ್ಪುವುದು ಕಷ್ಟವಾಗುತ್ತದೆ. ಈ ಎರಡು ಶಬ್ದಗಳನ್ನು ನಾವೆಲ್ಲಾ ಸಾಕಷ್ಟು ಬಾರಿ ಸಮಾನ ಅರ್ಥದಲ್ಲಿ ಉಪಯೋಗಿಸುತ್ತೇವೆ.

ನೀವು ಹೊಸ ಮೊಬೈಲ್ ಕೊಂಡಾಗ ಸಹಜವಾಗಿ ನಿಮಗೆ ಸಂತೋಷವಾಗುತ್ತದೆ. ಆದರೆ ಇದರಲ್ಲಿ ತೃಪ್ತಿಯೂ ಸೇರಿರುತ್ತದೆಯೇ? ಸೇರಿರಲು ಸಾಧ್ಯವಿದೆ– ನಿಮ್ಮ ಕಷ್ಟದ ದುಡಿಮೆಯಿಂದ ಅದನ್ನು ಕೊಂಡಾಗ ಮಾತ್ರ! ಅಪ್ಪನ ಹಣದಿಂದ ಕೊಂಡಾಗ ಸಿಗುವುದು ಕೇವಲ ಸಂತೋಷವಾದರೆ, ನಿಮ್ಮದೇ ದುಡಿಮೆಯಿಂದ ಕೊಂಡಾಗ ಸಿಗುವುದು ತೃಪ್ತಿ ಮತ್ತು ಸಂತೋಷ ಎರಡೂ. ಅಂದರೆ ತೃಪ್ತಿಯ ಜೊತೆ ಸಂತೋಷವೂ ಸೇರಿಕೊಂಡಿರುತ್ತದೆ. ಆದರೆ ಎಲ್ಲಾ ಸಂತೋಷದ ಜೊತೆಗೆ ತೃಪ್ತಿ ಇರಲೇಬೇಕೆಂದಿಲ್ಲ.

ಇನ್ನೂ ಕೆಲವು ಉದಾಹರಣೆಗಳನ್ನು ನೋಡಿ.

★ ನಕಲು ಮಾಡಿ ಗಳಿಸಿದ ಅಂಕ ಕೇವಲ ಸಂತೋಷವನ್ನು ನೀಡಿದರೆ, ಕಷ್ಟಪಟ್ಟು ಓದಿ ಗಳಿಸಿದ ಅಂಕ ತೃಪ್ತಿಯನ್ನು ನೀಡುತ್ತದೆ.

★ ಪರ್ವತಾರೋಹಣದ ಚಲನಚಿತ್ರ ಸಂತೋಷವನ್ನು ನೀಡಿದರೆ, ವಾಸ್ತವದಲ್ಲಿ ಬೆಟ್ಟ ಗುಡ್ಡಗಳ ಪ್ರವಾಸ ತೃಪ್ತಿಯನ್ನು ಕೊಡುತ್ತದೆ.

★ ಮದ್ಯಪಾನ ಸಂತೋಷವನ್ನು ಮಾತ್ರ ನೀಡಿದರೆ, ಕಷ್ಟದ ದುಡಿಮೆಯಲ್ಲಿ ತೃಪ್ತಿಯ ನಶೆ ಅಡಗಿರುತ್ತದೆ.

ತೃಪ್ತಿಯನ್ನು ಗಳಿಸುವ ಹಾದಿಯಲ್ಲಿ ಕೇವಲ ಸಂತೋಷವಿರುವುದಿಲ್ಲ. ಶ್ರಮ, ನಿರಾಸೆ, ಬೇಸರ, ಸಹನೆ, ಯೋಜನೆ ಎಲ್ಲವೂ ತೃಪ್ತಿಯನ್ನು ಗಳಿಸಲು ಅನಿವಾರ್ಯ. ತೃಪ್ತಿಯಲ್ಲಿ ಸಿಗುವ ಸಂತೋಷ ನಿಮ್ಮ ಬಳಿ ಕಾಯಮ್ಮಾಗಿ ಇರುವಂತಹದು ಮತ್ತು ಯಾರೂ ಕಸಿದುಕೊಳ್ಳಲಾಗದ್ದು. ತೃಪ್ತಿರಹಿತವಾದ ಸಂತೋಷ ಆ ಕ್ಷಣದ್ದು ಮಾತ್ರ. ಮೊಬೈಲ್ ಗೇಮ್‌ಗಳಲ್ಲಿ ಸಿಗುವ ಖುಷಿಗಾಗಿ ನಿರಂತರವಾಗಿ ಆಡುತ್ತಲೇ ಇರಬೇಕು. ಪರೀಕ್ಷೆಗಳಲ್ಲಿ ಗಳಿಸಿದ ಉತ್ತಮ ಅಂಕದಿಂದ ಸಿಗುವ ತೃಪ್ತಿ ನಿಮ್ಮೊಳಗೆ ಸೇರಿಕೊಂಡು ನಿರಂತರವಾದ ಸಂತೋಷದ ಮೂಲವಾಗುತ್ತದೆ.

ಇದೆಲ್ಲದರ ಅರ್ಥ ಕೇವಲ ಸಂತೋಷವನ್ನು ನೀಡುವ ಚಟುವಟಿಕೆಗಳು ಅರ್ಥಹೀನ ಎಂದೇನಲ್ಲ. ಆದರೆ ಅವುಗಳಿಗಾಗಿ ಮೀಸಲಿಡುವ ಸಮಯವನ್ನು ಮಿತಿಯಲ್ಲಿಡಿ. ನಿಮಗೆ ಜೀವಮಾನವೆಲ್ಲಾ ತೃಪ್ತಿ ಮತ್ತು ಸಂತೋಷವನ್ನು ನೀಡಬಲ್ಲ ದೂರಗಾಮಿ ಚಟುವಟಿಕೆಗಳತ್ತ ನಿಮ್ಮ ಒಲವನ್ನು ಹೆಚ್ಚಿಸುತ್ತಾ ಹೋಗಿ. ಬದುಕಿನ ಒಟ್ಟಾರೆ ಅರ್ಥ, ಸುಖ, ಸಮಾಧಾನಗಳು ಅಡಗಿರುವುದು ಇಲ್ಲಿಯೇ.

ಇವತ್ತು ಇಡೀ ಜಗತ್ತು ಈ ಕ್ಷಣದ ಸಂತೋಷದ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದೆ. ಇದಕ್ಕಾಗಿ ನಿಮ್ಮ ಮುಂದೆ ವಿಧವಿಧದ ಆಕರ್ಷಣೆಗಳನ್ನು ಹರಡಿ ಬಹುರಾಷ್ಟ್ರೀಯ ಕಂಪೆನಿಗಳು ನಿಮ್ಮನ್ನು ದಾಸ್ಯಕ್ಕೆ ತಳ್ಳುತ್ತಿವೆ. ಮೊಬೈಲ್‌ಗಳು, ವಾಹನಗಳು, ಬಟ್ಟೆಬರೆ, ಇತರ ಗ್ಯಾಜೆಟ್‌ಗಳು– ಹೀಗೆ ನಮ್ಮನ್ನು ಸೆಳೆದು ತಮ್ಮ ವಹಿವಾಟನ್ನು ಹೆಚ್ಚಿಸಿಕೊಳ್ಳಲು ಸಾವಿರಾರು ಜನರಿದ್ದಾರೆ. ನಮ್ಮ ಸಿನಿಮಾಗಳೂ ನಿಮ್ಮ ಮುಂದೆ 'ಈ ಕ್ಷಣದ ಸುಖವೇ ಮುಖ್ಯ' ಎನ್ನುವ ಭ್ರಮಾಲೋಕವನ್ನು ತೆರೆದಿಡುತ್ತವೆ. ಇದರ ಬಗೆಗೆ ಎಚ್ಚರವಹಿಸಿ. ನಿಮ್ಮ ಆದ್ಯತೆಗಳನ್ನು ಗುರುತಿಸಿಕೊಂಡು ಮುಂದುವರೆಯಿರಿ.